

بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಖೈಬರ್ ಯುದ್ಧದ ವಿವಿಧ ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04-04-2025** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ. بِسْمِ اللّٰهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ರಮಝಾನಿಗೆ ಮುಂಚೆ ಹಝ್ರತ್ ಪೈಗಂಬರ್(ಸ)ರ ಜೀವನದ ಘಟನೆಗಳನ್ನು ಯುದ್ಧಗಳ ಹಿನ್ನೆಲೆಯಲ್ಲಿ ವಿವರಿಸಲಾಗುತ್ತಿತ್ತು. ಇದಕ್ಕೆ ಸಂಬಂಧಪಟ್ಟು ಖೈಬರ್ ಯುದ್ಧದ ಘಟನೆಗಳನ್ನು ಪ್ರಸ್ತಾಪಿಸಲಾಗುತ್ತಿತ್ತು. ಇಂದು ಸಹ ನಾನು ಅದೇ ವಿಷಯದ ಬಗ್ಗೆ ಕೆಲವು ವಿವರಣೆಗಳನ್ನು ನೀಡುವೆನು. ಖೈಬರ್‌ನ ವಿಜಯದ ಸಂತೋಷದ ಜೊತೆಗೆ, ಅದೇ ದಿನಗಳಲ್ಲಿ ಹಝ್ರತ್ ಪೈಗಂಬರ್(ಸ)ರಿಗೆ ಮತ್ತೊಂದು ಸಂತೋಷದ ಸಂಗತಿ ಉಂಟಾಗಿತ್ತು. ಅದರ ಬಗ್ಗೆ ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ನನಗೆ ಖೈಬರ್‌ನ ವಿಜಯ ಹೆಚ್ಚು ಸಂತೋಷದಾಯಕವಾಗಿತ್ತೋ ಅಥವಾ ಈ ವಿಷಯ ಹೆಚ್ಚು ಸಂತೋಷದಾಯಕವಾಗಿತ್ತೋ ಎಂದು ನನಗೆ ವಿವರಿಸಲು ಸಾಧ್ಯವಿಲ್ಲ. ಅದು ಹಿಜ್ರತ್ ಮಾಡಿದವರೊಂದಿಗೆ ಹಬ್‌ಶದಿಂದ ಹಝ್ರತ್ ಜಾಫರ್(ರ)ರ ಮರಳುವಿಕೆಯಾಗಿತ್ತು.

ಹುದೈಬಿಯಾದ ಒಪ್ಪಂದದ ನಂತರ, ಹಝ್ರತ್ ಪೈಗಂಬರ್(ಸ) ಅಬೀಸೀನಿಯಾದ ಅರಸನಿಗೆ ಒಂದು ಪತ್ರವನ್ನು ಕಳುಹಿಸಿದರು. ಅಲ್ಲಿ ಉಳಿದಿರುವ ಮುಹಾಜಿರ್ ಮುಸ್ಲಿಮರನ್ನು ಮದೀನಾಗೆ ನನ್ನ ಬಳಿಗೆ ಕಳುಹಿಸಿಕೊಡಬೇಕೆಂದು ಅದರಲ್ಲಿ ತಿಳಿಸಿದರು. ಅದರಂತೆ, ಹದಿನಾಲ್ಕು-ಹದಿನೈದು ವರ್ಷಗಳ ಪರದೇಶ ಜೀವನದ ನಂತರ, ಈ ಜನರು ಎರಡು ಹಡಗುಗಳಲ್ಲಿ ಮದೀನ ತಲುಪಿದರು. ಹಝ್ರತ್ ಪೈಗಂಬರ್(ಸ) ಖೈಬರ್‌ಗೆ ಹೋಗಿದ್ದಾರೆ ಎಂದು ಅವರಿಗೆ ಗೊತ್ತಾದಾಗ, ಹಝ್ರತ್ ಪೈಗಂಬರ್(ಸ)ರನ್ನು ಆದಷ್ಟು ಬೇಗ ಭೇಟಿಯಾಗುವ ತವಕದಿಂದ ಅವರು ಮದೀನಾದಲ್ಲಿ ನಿಲ್ಲದೆ ಖೈಬರ್‌ಗೆ ಹೊರಟರು. ಈ ಜನರೊಂದಿಗೆ ಹಝ್ರತ್ ಅಬೂ ಮೂಸಾ ಅಶ್‌ಅರಿ(ರ) ಸಹ ತಮ್ಮ ಕೋಮಿನ ಐವತ್ತಕ್ಕೂ ಹೆಚ್ಚು ಜನರೊಂದಿಗೆ ಮದೀನಾಕ್ಕೆ ತಲುಪಿದ್ದರು. ಅವರೊಂದಿಗೆ ದೌಸ್ ಗೋತ್ರದ ಕೆಲವು ವ್ಯಕ್ತಿಗಳು ಸಹ ಬಂದಿದ್ದರು, ಅವರಲ್ಲಿ ಅಬೂ ಹುರೈರಾ(ರ), ತುಫೈಲ್ ಬಿನ್ ಅಮ್ರ್(ರ) ಮತ್ತು ಅವರ ಸಹಚರರು ಇದ್ದರು. ಅಶ್‌ಜ ಗೋತ್ರದ ಕೆಲವು ಜನರು ಸಹ ಬಂದಿದ್ದರು. ಆಗಮಿಸಿದ ಎಲ್ಲರಿಗೂ ಹಝ್ರತ್ ಪೈಗಂಬರ್(ಸ) ಖೈಬರ್‌ನ ಸಂಪತ್ತಿನಿಂದ ಸ್ವಲ್ಪ ನೀಡಿದರು.

ಹಝ್ರತ್ ಜಾಫರ್(ರ) ಮತ್ತು ಅವರೊಂದಿಗೆ ಇತರ ಮುಸ್ಲಿಮರು ಹಡಗಿನಲ್ಲಿ ಪ್ರಯಾಣಿಸಿ ತಲುಪಿದ್ದರಿಂದ, ಅವರನ್ನು ಅಸ್‌ಹಾಬುಸ್ಸಫೀನ (ಹಡಗಿನವರು) ಎಂದು ಕರೆಯಲಾಗುತ್ತಿತ್ತು. ಅವರು ಮದೀನವನ್ನು ತಲುಪಿದಾಗ ಹದಿನೈದು ವರ್ಷಗಳು ಕಳೆದಿತ್ತು. ಅಷ್ಟರಲ್ಲಿ ಇಲ್ಲಿನ ಮುಹಾಜಿರ್ ಮುಸ್ಲಿಮರು ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದರು ಮತ್ತು ಹಿಜ್ರತ್‌ನಲ್ಲಿಯೂ ಭಾಗಿಯಾಗಿದ್ದರು, ಆದ್ದರಿಂದ ನಾವು ಅವರಿಗಿಂತ ಹೆಚ್ಚು ಶ್ರೇಷ್ಠರು ಎಂದು ಪರಸ್ಪರ ಮಾತನಾಡಿಕೊಳ್ಳುತ್ತಿದ್ದರು ಎಂದು ತಿಳಿದುಬರುತ್ತದೆ. ಒಂದು ಬಾರಿ ಹಝ್ರತ್ ಜಾಫರ್(ರ)ರ ಪತ್ನಿ ಹಝ್ರತ್ ಅಸ್ಮಾ ಬಿನ್ತ್ ಉಮೈಸ್(ರ), ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಹಫ್ಸ(ರ)ರನ್ನು ಭೇಟಿಯಾಗಲು ಬಂದರು, ಆಗ ಹಝ್ರತ್ ಉಮರ್(ರ) ಸಹ ಅಲ್ಲಿದ್ದರು. ಈ ಮಹಿಳೆ ಯಾರು? ಎಂದು ಅವರು ಕೇಳಿದರು. ಯಾರೆಂದು ಗೊತ್ತಾದಾಗ ಹಝ್ರತ್ ಉಮರ್(ರ) ಹೇಳಿದರು: ಮದೀನದ ಹಿಜ್ರತ್‌ನಲ್ಲಿ ನಾವು ನಿಮ್ಮನ್ನು ಹಿಂದಿಕ್ಕಿದ್ದೇವೆ, ಆದ್ದರಿಂದ ನಾವು ರಸೂಲ್(ಸ)ಗೆ ನಿಮಗಿಂತ ಹೆಚ್ಚು ಹತ್ತಿರವಾಗಿದ್ದೇವೆ. ಇದನ್ನು ಕೇಳಿ ಅವರು ದುಃಖ ಮತ್ತು ಕೋಪದಿಂದ ಹೇಳಿದರು: ಅಲ್ಲಾಹನಾಣೆ! ಹಾಗೆ ಆಗಲು ಸಾಧ್ಯವೇ ಅಲ್ಲ. ನೀವು ಹಝ್ರತ್ ಪೈಗಂಬರ್(ಸ)ರೊಂದಿಗೆ ವಾಸಿಸುತ್ತಿದ್ದಿರಿ, ಅವರು ನಿಮ್ಮ ಹಸಿದವರಿಗೆ ಆಹಾರ ನೀಡುತ್ತಿದ್ದರು, ನಿಮ್ಮಲ್ಲಿ ಅರಿವು ಕಡಿಮೆ ಉಳ್ಳವರಿಗೆ ಉಪದೇಶ ನೀಡುತ್ತಿದ್ದರು. ಆದರೆ ನಾವು ನಮ್ಮ ತಾಯ್ನಾಡಿನಿಂದ ದೂರ, ಪರದೇಶದಲ್ಲಿ, ದೂರದ ಶತ್ರು ದೇಶದಲ್ಲಿದ್ದೆವು, ನಮಗೆ ಅಲ್ಲಿ ಅನೇಕ ರೀತಿಯ ಭಯ ಮತ್ತು ಆತಂಕಗಳು ಉಂಟಾಗುತ್ತಿದ್ದವು, ನಾವು ಆ ಎಲ್ಲ ದುಃಖಗಳನ್ನು ಅಲ್ಲಾಹನಿಗಾಗಿಯೂ ಮತ್ತು ಅವನ ರಸೂಲ್(ಸ)ರಿಗಾಗಿಯೂ ಸಹಿಸಿಕೊಂಡೆವು. ಅಲ್ಲಾಹನಾಣೆ! ನಾನು ಇದರ ಬಗ್ಗೆ ಹಝ್ರತ್ ಪೈಗಂಬರ್(ಸ)ರೊಡನೆ ಕೇಳುವವರೆಗೂ ನಾನು ಏನನ್ನೂ ತಿನ್ನಲಾರೆ. ಅನಂತರ ಅವರು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಈ ಎಲ್ಲ ಸಂಗತಿಗಳನ್ನು ವಿವರಿಸಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಅವರು ನಿಮ್ಮಗಿಂತ ಹೆಚ್ಚು ಶ್ರೇಷ್ಠರಲ್ಲ, ಬದಲಾಗಿ ಅವರ ಮತ್ತು ಅವರ ಸಹಚರರದ್ದು ಒಂದೇ ಹಿಜ್ರತ್ ಆಗಿತ್ತು. ಆದರೆ ನಿಮ್ಮದು, ಅಂದರೆ ಹಬ್‌ಶದ ಕಡೆಗೆ ಹಡಗಿನ ಮೂಲಕ ಪ್ರಯಾಣಿಸಿದವರದ್ದು ಎರಡು ಹಿಜ್ರತ್‌ಗಳು ಆಗಿವೆ.

ಇಲ್ಲಿ ಮುಸ್ಲಿಮನಾದ ಯಸಾರ್ ಎಂಬ ಹೆಸರಿನ ಓರ್ವ ಹಬ್ಶಿ ಗುಲಾಮನ ಶಹಾದತಿನ ಪ್ರಸ್ತಾಪ ಸಹ ಇದೆ. ಒಂದು ವರದಿಯ ಪ್ರಕಾರ ಆತ ಖೈಬರ್‌ನ ಒಬ್ಬ ವ್ಯಕ್ತಿಯ ಕುರಿಗಳನ್ನು ಮೇಯಿಸುತ್ತಿದ್ದನು. ಅವನು ತನ್ನ ಕುರಿಗಳನ್ನು ಮೇಯಿಸಲು ಹೊರಟಾಗ ಮುಸ್ಲಿಮರು ಆತನನ್ನು ಹಿಡಿದು ಹಝ್ರತ್ ಪೈಗಂಬರ್(ಸ)ರ ಬಳಿಗೆ ಕರೆದುಕೊಂಡು ಬಂದರು. ಒಂದು ವಿಶದವಾದ ವರದಿಯ ಪ್ರಕಾರ ಆತ ತಾನೇ ಕುರಿಗಳೊಂದಿಗೆ ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಿದ್ದನು ಎನ್ನಲಾಗಿದೆ. ಹಝ್ರತ್ ಪೈಗಂಬರ್(ಸ) ಆತನೊಡನೆ ಮಾತನಾಡಿದರು. ಆ ಗುಲಾಮನು ಕೇಳಿದನು: ನಾನು ಅಲ್ಲಾಹನಲ್ಲಿ ನಂಬಿಕೆ ಇಟ್ಟರೆ ನನಗೆ ಏನು ಸಿಗುವುದು? ಹಝ್ರತ್ ಪೈಗಂಬರ್(ಸ) ಹೇಳಿದರು, ನೀನು ಅವನಲ್ಲಿ ನಂಬಿಕೆ ಇಟ್ಟರೆ ನಿನಗೆ ಸ್ವರ್ಗ ಲಭಿಸುವುದು. ಹಾಗೆ ಆ ಗುಲಾಮನು ಇಸ್ಲಾಂ ಧರ್ಮವನ್ನು ಸ್ವೀಕರಿಸಿದನು ಮತ್ತು ಆತ ಕೇಳಿದನು: ಹೇ ಅಲ್ಲಾಹನ ರಸೂಲರೇ! ನಾನು ಇವರೊಂದಿಗೆ ಹೋರಾಡಿ ಕೊಲ್ಲಲ್ಪಟ್ಟರೆ ನಾನು ಸ್ವರ್ಗವನ್ನು ಪ್ರವೇಶಿಸುವೆನೇ? ಹಝ್ರತ್ ಪೈಗಂಬರ್(ಸ) ಉತ್ತರಿಸಿದರು: ಹೌದು, ನೀನು ಸ್ವರ್ಗವನ್ನು ಪ್ರವೇಶಿಸುತ್ತೀ. ಆತ ಹೇಳಿದನು: ಹೇ ಅಲ್ಲಾಹನ ರಸೂಲರೇ, ಈ ಕುರಿಗಳು ನನ್ನ ಬಳಿ ಅಮಾನತ್ತಾಗಿವೆ, ಅವುಗಳನ್ನು ಏನು ಮಾಡಲಿ? ಹಝ್ರತ್ ಪೈಗಂಬರ್(ಸ) ಹೇಳಿದರು: ಅವುಗಳನ್ನು ಸೈನ್ಯದಿಂದ ಹೊರಗೆ ತೆಗೆದುಕೊಂಡು ಹೋಗಿ ಖಾಲಿ ಮೈದಾನದಲ್ಲಿ ಬಿಟ್ಟುಬಿಡು, ಖಂಡಿತವಾಗಿಯೂ ಅಲ್ಲಾಹನು ನಿನ್ನ ಅಮಾನತ್ತನ್ನು ನಿನ್ನ ಪರವಾಗಿ ಈಡೇರಿಸುವನು, ಅಂದರೆ ಅವುಗಳು ಅವುಗಳ ಮಾಲಿಕರ ಬಳಿಗೆ ತಲುಪುವುವು. ಹಾಗೆಯೇ ಆಯಿತು.

(ಹುಝೂರ್ ಹೇಳಿದರು:) ಹಝ್ರತ್ ಪೈಗಂಬರ್(ಸ) ಯುದ್ಧ ಸಂಪತ್ತನ್ನು ಪಡೆಯಲಿಕ್ಕಾಗಿ ಯುದ್ಧಗಳನ್ನು ಮಾಡಿದ್ದರು ಎಂದು ಆಕ್ಷೇಪಿಸುವ ಜನರು, ವಿಶೇಷವಾಗಿ ಖೈಬರ್‌ನ ವಿಷಯದಲ್ಲಿಯೂ ಈ ಆಕ್ಷೇಪವನ್ನು ಮಾಡಲಾಗುತ್ತದೆ, ಯಹೂದಿಯರ ಸಂಪತ್ತನ್ನು ಅನ್ಯಾಯವಾಗಿ ವಶಪಡಿಸಿಕೊಳ್ಳಲು ಈ ದೌರ್ಜನ್ಯಗಳನ್ನು ಮಾಡಲಾಯಿತು ಎಂದು ಹೇಳಲಾಗುತ್ತದೆ. ಇದು ನಿಜವಾಗಿದ್ದರೆ, ಯುದ್ಧದ ಸ್ಥಿತಿಯಲ್ಲಿ ಶತ್ರುಗಳ ಕುರಿಗಳ ಹಿಂಡು ಇದ್ದಾಗ ಮತ್ತು ಖೈಬರ್‌ನಲ್ಲಿ ಸಹಾಬಿಯರು ಹಸಿವಿನಿಂದ ಬಳಲುತ್ತಿದ್ದಾಗ, ಯುದ್ಧ ಸಂಪತ್ತಾಗಿ ಸುಲಭದಲ್ಲಿ ಲಭಿಸಿದ್ದ ಈ ಕುರಿಗಳನ್ನು ಬಳಸಬಹುದಾಗಿತ್ತು. ಆದರೆ ಹಝ್ರತ್ ಪೈಗಂಬರ್(ಸ) ಯುದ್ಧದ ಸ್ಥಿತಿಯಲ್ಲಿಯೂ ಅಮಾನತ್ತಿನ ಹಕ್ಕನ್ನು ಪೂರೈಸುತ್ತಾ ಕುರಿಗಳನ್ನು ಹಿಂದಿರುಗಿಸಲು ಆದೇಶಿಸಿದರು. ಅಂತೂ ಆತ ಮುಂದೆ ಸಾಗಿ ಹೋರಾಡಿದನು. ಕೊನೆಗೆ ಹುತಾತ್ಮನಾದನು.

ಖೈಬರ್‌ನ ಯುದ್ಧಸಂಪತ್ತು ಮತ್ತು ಅದರ ವಿತರಣೆಯ ಬಗ್ಗೆ ಹಝ್ರತ್ ಅಬೂ ಹುರೈರ(ರ)ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್(ಸ) ಅದನ್ನು ಒಟ್ಟಾರೆಯಾಗಿ ಮೂವತ್ತಾರು ಭಾಗಗಳಾಗಿ ವಿಂಗಡಿಸಿದರು. ಹಝ್ರತ್ ಪೈಗಂಬರ್(ಸ) ಅವುಗಳಲ್ಲಿ ಅರ್ಧದಷ್ಟು, ಅಂದರೆ ಹದಿನೆಂಟು ಭಾಗಗಳನ್ನು ಮುಸ್ಲಿಮರಿಗಾಗಿ ಮೀಸಲಿಟ್ಟರು. ಅವುಗಳಲ್ಲಿ ಪ್ರತಿಯೊಂದೂ ನೂರು ಭಾಗಗಳನ್ನು ಒಳಗೊಂಡಿತ್ತು, ಅಂದರೆ ಒಂದು ಸಾವಿರದ ಎಂಟುನೂರು ಪಾಲುಗಳಿದ್ದವು. ಹಝ್ರತ್ ಪೈಗಂಬರ್(ಸ)ರ ಒಂದು ಪಾಲು ಅವುಗಳಲ್ಲಿ ಇರುವ ಇತರ ಪಾಲುಗಳಂತೆಯೇ ಆಗಿತ್ತು. ಉಳಿದ ಅರ್ಧವನ್ನು ಹಝ್ರತ್ ಪೈಗಂಬರ್(ಸ) ಭವಿಷ್ಯದ ಪರಿಸ್ಥಿತಿಗಳು, ವ್ಯವಹಾರಗಳು, ಘಟನೆಗಳು ಮತ್ತು ಮುಸ್ಲಿಮರಿಗೆ ಎದುರಾಗುವ ವಿಷಯಗಳಿಗಾಗಿ ಮೀಸಲಿಟ್ಟರು. ಖೈಬರ್‌ನ ಕೋಟೆಗಳಿಂದ ಯುದ್ಧ ಸಂಪತ್ತನ್ನು ಸಂಗ್ರಹಿಸಲಾದಾಗ, ಅದರಲ್ಲಿ ತೌರಾತಿನ ಕೆಲವು ಕಾಗದಗಳು ಕೂಡ ಇದ್ದುವು, ಯಹೂದಿಯರ ಬೇಡಿಕೆಯ ಮೇರೆಗೆ ಹಝ್ರತ್ ಪೈಗಂಬರ್(ಸ) ಆ ಕಾಗದಗಳನ್ನು ಸುರಕ್ಷಿತವಾಗಿ ಹಿಂದಿರುಗಿಸಲು ಆದೇಶಿಸಿದರು. ಹುಝೂರ್ ಹೇಳಿದರು: ಹಝ್ರತ್ ಪೈಗಂಬರ್(ಸ)ರ ಧಾರ್ಮಿಕ ಸಹಿಷ್ಣುತೆ, ಧಾರ್ಮಿಕ ಭಾವನೆಗಳ ಹಾಗೂ ಸಂವೇದನೆಗಳ ಗೌರವಿಸುವಿಕೆಯು ಅತ್ಯುನ್ನತವಾಗಿತ್ತು. ಯಹೂದಿಯರ ತೌರಾತನ್ನು ಸುರಕ್ಷಿತವಾಗಿ ಹಿಂದಿರುಗಿಸಲು ಅವರು ಆದೇಶಿದರು. ಇಂದಿನಂತೆ ಮುಸ್ಲಿಮರೊಡನೆ ಇರುವ ವಿರೋಧದ ಕಾರಣದಿಂದ ಪವಿತ್ರ ಖುರ್‌ಆನನ್ನು ಸುಡುವಂತಹ ಕೃತ್ಯಗಳನ್ನು ಹಝ್ರತ್ ಪೈಗಂಬರ್(ಸ) ಮಾಡಿರಲಿಲ್ಲ.

ಖೈಬರ್‌ನಿಂದ ಹಿಂದಿರುಗುವಾಗ ವಾದಿಯುಲ್ ಖುರಾ ಯುದ್ಧದ ಪ್ರಸ್ತಾಪ ಸಹ ಇದೆ. ಖೈಬರ್‌ನ ವಿಜಯದ ನಂತರ ಹಝ್ರತ್ ಪೈಗಂಬರ್(ಸ) ಕೆಲವು ದಿನಗಳ ಕಾಲ ಅಲ್ಲಿ ತಂಗಿದರು. ಅನಂತರ ಇಸ್ಲಾಮಿನ ಸೈನ್ಯವು ಹಿಂತಿರುಗಲು ಹೊರಟಾಗ ವಾದಿಯುಲ್ ಖುರಾದಲ್ಲಿ ಯಹೂದಿಯರೊಡನೆ ಹೋರಾಟ ನಡೆಯಿತು. ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ: ವಾದಿಯುಲ್ ಖುರಾದಲ್ಲಿ ಹಝ್ರತ್ ಪೈಗಂಬರ್(ಸ)ರೊಂದಿಗೆ ಮುದಅಮ್ ಎಂಬ ಗುಲಾಮನು ಇದ್ದನು. ಆತ ಹಝ್ರತ್ ಪೈಗಂಬರ್(ಸ)ರ ಪಲ್ಲಕ್ಕಿಯನ್ನು ಇಳಿಸುತ್ತಿದ್ದಾಗ, ಒಂದು ಬಾಣವು ಆತನಿಗೆ ತಗುಲಿ ಆತ ಮರಣ ಹೊಂದಿದನು. ಆತನಿಗೆ ಶಹಾದತ್ ಅನುಗ್ರಹೀತವಾಗಲಿ ಎಂದು ಜನರು ಹೇಳಿದರು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಇಲ್ಲ, ನನ್ನ ಜೀವ ಯಾರ ಕೈಯಲ್ಲಿದೆಯೋ ಆ ಅಲ್ಲಾಹನ ಮೇಲೆ ಆಣೆ, ಆತ ಖೈಬರ್‌ನ ದಿನದಂದು ಯುದ್ಧ ಸಂಪತ್ತಿನಿಂದ ತೆಗೆದುಕೊಂಡಿದ್ದ ಆ ಹೊದಿಕೆಯು ಆತನ ಮೇಲೆ ಬೆಂಕಿಯಂತೆ ಉರಿಯುತ್ತಿದೆ. ಏಕೆಂದರೆ ಅದರ ಪಾಲನ್ನು ವಿಂಗಡಿಸುವುದಕ್ಕೆ ಮುಂಚಿತವಾಗಿ ಆತನು ಅದನ್ನು ತೆಗೆದಿದ್ದನು. ಆ ಹೊದಿಕೆಯನ್ನು ಕದ್ದ ಕಾರಣದಿಂದ ಆತನು ನರಕಕ್ಕೆ ಹೋಗುತ್ತಿದ್ದಾನೆ ಎಂಬ ಅಪಾಯಕಾರಿ ಮಾತನ್ನು ಕೇಳಿದ ಒಬ್ಬ ವ್ಯಕ್ತಿಯು ಒಂದು ಅಥವಾ ಎರಡು ಶೂಲೇಸನ್ನು

ತಂದು, ನಾನು ಇದನ್ನು ತೆಗೆದುಕೊಂಡಿದ್ದೆ ಎಂದು ಹೇಳಿದನು. ಆಗ ಹಝ್ರತ್ ಪೈಗಂಬರ್(ಸ) ಹೇಳಿದರು, ಅದು ಒಂದಿರಲಿ ಎರಡರಲಿ, ಅವು ನರಕಕ್ಕೆ ಕೊಂಡೊಯ್ಯಲು ಕಾರಣವಾಗುತ್ತವೆ.

ಹುಝೂರ್ ಹೇಳಿದರು: ಹಝ್ರತ್ ಪೈಗಂಬರ್(ಸ) ನಾಲ್ಕು ದಿನಗಳ ಕಾಲ ವಾದಿಯುಲ್ ಖುರಾದಲ್ಲಿ ತಂಗಿದರು. ಅನಂತರ ಮದೀನಾಗೆ ಹಿಂತಿರುಗಿದರು. ಈ ವಿಷಯ ಮುಂದುವರಿಯುವುದು. ಇನ್‌ಶಾ ಅಲ್ಲಾಹ್.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುತ್ತೇನೆ. ಜುಮಾ ನಮಾಝಿನ ನಂತರ ಅವರ ಜನಾಝಾ ಗಾಇಬ್ ನಮಾಝನ್ನು ನಿರ್ವಹಿಸಲಾಗುವುದು. ಮೊದಲ ಪ್ರಸ್ತಾಪ ಮುಕರ್ರಮ್ ಮೌಲಾನಾ ಮುಹಮ್ಮದ್ ಕರೀಮುದ್ದೀನ್ ಶಾಹಿದ್ ಸಾಹಿಬ್‌ರದ್ದು ಆಗಿದೆ. ಅವರು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ಸದರ್ ಆಗಿದ್ದರು. ರಮಝಾನ್ ದಿನಗಳಲ್ಲಿ ಎಂಭತ್ತೇಳು ವರ್ಷ ವಯಸ್ಸಿನಲ್ಲಿ ಅವರು ನಿಧನರಾದರು. ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ವಸಿಯ್ಯತ್ ಮಾಡಿದ್ದರು. ಅವರ ತಂದೆ ಬೈಅತ್ ಮಾಡಿ ಅಹ್ಮದಿಯಾ ಜಮಾಅತಿಗೆ ಪ್ರವೇಶಿಸಿದ್ದರು. ಚಿಂಟಗುಂಟದ ಸನ್ಮಾನ್ಯ ಸೇಠ್ ಮುಹಮ್ಮದ್ ಮೊಯಿನುದ್ದೀನ್ ಸಾಹಿಬ್ ಶಿಕ್ಷಣಕ್ಕಾಗಿ ಅವರನ್ನು ಖಾದಿಯಾನಿಗೆ ಕಳುಹಿಸಿದರು. 1957ರಲ್ಲಿ ಅವರು ಮದ್ರಸಾ ಅಹ್ಮದಿಯಾದಿಂದ ತೇರ್ಗಡೆಯಾದರು. ಅನಂತರ 1960ರಲ್ಲಿ ಚಂಡೀಗಢಿನ ಪಂಜಾಬ್ ಯೂನಿವರ್ಸಿಟಿಯಿಂದ ಮೌಲವಿ ಫಾಝಿಲ್ ಪರೀಕ್ಷೆಯಲ್ಲಿ ಪಾಸಾದರು. ಅನಂತರ ಜಾಮಿಅ ಅಹ್ಮದಿಯಾ ರಬ್ವಾದಿಂದ ಶಾಹಿದ್ ಪದವಿ ಪಡೆದರು. ಅವರು ಶಾಹಿದ್ ಪದವಿ ಪಡೆದ ಭಾರತದ ಮೊದಲ ಮುಬಲ್ಲಿಗ್ ಆಗಿದ್ದರು. ಖಾದಿಯಾನಿನಲ್ಲಿ ವಿವಿಧ ಸೇವೆಗಳನ್ನು ಸಲ್ಲಿಸುವ ಸೌಭಾಗ್ಯ ಅವರಿಗೆ ಲಭಿಸಿತ್ತು. ಈ ಅವಧಿಯಲ್ಲಿ ಅವರು ಸದರ್ ಅಂಜುಮನ್ ಅಹ್ಮದಿಯಾ ಖಾದಿಯಾನಿನ ಸದಸ್ಯರಾಗಿ ನೇಮಕಗೊಂಡರು. ಅವರಿಗೆ ಅಡಿಷನಲ್ ನಾಝಿಮ್ ಇರ್‌ಶಾದ್ ವಖ್ಫೇ ಜದೀದ್ ಬೈರೂನ್, ಸದರ್ ಉಮೂಮಿ, ಸದರ್ ಮಜ್ಲಿಸ್ ವಖ್ಫೇ ಜದೀದ್, ಎರಡು ಬಾರಿ ಜಾಮಿಅ ಅಹ್ಮದಿಯಾದ ಪ್ರಿನ್ಸಿಪಾಲ್, ಸದರ್ ಖಝಾ ಬೋರ್ಡ್ ಮತ್ತು ಸದರ್ ಮಜ್ಲಿಸ್ ಕಾರ್‌ಪರ್‌ದಾಝ್ ಆಗಿಯೂ ಸೇವೆ ಸಲ್ಲಿಸುವ ಸೌಭಾಗ್ಯ ಲಭಿಸಿತ್ತು. ಅನಂತರ 2021ರಲ್ಲಿ ನಾನು ಅವರನ್ನು ಸದರ್ ಅಂಜುಮನ್ ಅಹ್ಮದಿಯಾದ ಸದರ್ ಆಗಿ ನೇಮಿಸಿದೆ. ಮರಣದ ವರೆಗೂ ಅವರು ಅದೇ ಹುದ್ದೆಯಲ್ಲಿ ಇದ್ದರು.

ಖಾದಿಯಾನಿನ ನಾಝಿರ್ ಅಅ್‌ಲಾ ಸಾಹಿಬ್ ಹೇಳುತ್ತಾರೆ: ದಿವಂಗತರು ಬಹಳ ಸರಳ ಸ್ವಭಾವದ ಮತ್ತು ಇರುವುದರಲ್ಲೇ ಸಂತೃಪ್ತರಾಗಿ ಜೀವನ ನಡೆಸುತ್ತಿದ್ದ ವ್ಯಕ್ತಿಯಾಗಿದ್ದರು. (ಹುಝೂರ್ ಹೇಳಿದರು:) ಇದು ಸತ್ಯ, ನಾನು ಸಹ ಇದನ್ನು ನೋಡಿದ್ದೇನೆ. ದಿವಂಗತರಿಗೆ ಜಮಾಅತಿನಿಂದ ಲಭಿಸುತ್ತಿದ್ದ ವೇತನ ಅಥವಾ ಆದಾಯದಿಂದಲೇ ಗೌರವಯುತವಾಗಿ ಜೀವನ ನಡೆಸುತ್ತಿದ್ದರು. ಸಾಲ ಮಾಡಿ ಖರ್ಚು ಮಾಡುವುದನ್ನು ತೀರಾ ಇಷ್ಟಪಡುತ್ತಿರಲಿಲ್ಲ. ಅವರು ಅತ್ಯಂತ ಸುಂದರವಾದ ಕೈಬರಹವನ್ನು ಹೊಂದಿದ್ದ ಮತ್ತು ಉನ್ನತ ಮಟ್ಟದ ಲೇಖಕರಾಗಿದ್ದರು. ಕಂಪ್ಯೂಟರ್ ಕಾಂಪೋಸಿಂಗ್ ಪ್ರಾರಂಭವಾಗುವ ವರೆಗೂ ಬದ್ರ್ ಪತ್ರಿಕೆ ಮತ್ತು ಜಮಾಅತಿನ ಪುಸ್ತಕಗಳು ಹಾಗೂ ನಿಯತಕಾಲಿಕೆಗಳನ್ನು ಬರೆಯುವ ಸೌಭಾಗ್ಯ ಅವರಿಗೆ ದೊರಕುತ್ತಿತ್ತು. ಅವರು ಉತ್ತಮ ವಾಗ್ಮಿ ಮತ್ತು ಲೇಖಕರಾಗಿದ್ದರು. ಖಾದಿಯಾನ್ ಜಲ್ಸ ಮತ್ತು ಜಮಾಅತಿನ ಇತರ ಭಾಷಣಗಳನ್ನು ಮಾಡಲು ಹಾಗೂ ತರಬೇತಿ ಸಭೆಗಳಲ್ಲಿ ಭಾಷಣ ಮಾಡುವ ಸೌಭಾಗ್ಯ ಅವರಿಗೆ ದೊರಕುತ್ತಿತ್ತು. ಖಾದಿಯಾನಿನಿಂದ ಎಂ.ಟಿ.ಎ.ಯಲ್ಲಿ ನೇರ ಪ್ರಸಾರವಾಗುತ್ತಿರುವ ರಾಹೇ ಹುದಾ ಕಾರ್ಯಕ್ರಮದಲ್ಲಿ ದೀರ್ಘಕಾಲದ ವರೆಗೂ ಪ್ರಶ್ನೆಗಳಿಗೆ ಉತ್ತರಿಸುವ ಸೌಭಾಗ್ಯವನ್ನು ಅವರು ಪಡೆದರು. ಅವರಿಗೆ ಕಿಡ್ನಿಯ ಕಾಯಿಲೆ ಇತ್ತು ಮತ್ತು ಅವರು ದುರ್ಬಲರಾಗಿದ್ದರು. ಇದರ ಹೊರತಾಗಿಯೂ ಅವರು ಬಹಳ ಧೈರ್ಯದಿಂದ ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಿದ್ದರು. ಅವರ ಮಾದರಿ ನಿಜಕ್ಕೂ ಅನುಕರಣೀಯವಾಗಿತ್ತು. ರೋಗಾವಸ್ಥೆ ಮತ್ತು ದುರ್ಬಲ ಆರೋಗ್ಯದ ಹೊರತಾಗಿಯೂ ಅವರು 2024ರ ಜಲ್ಸ ಸಾಲಾನಾ ಖಾದಿಯಾನಿನ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆಯನ್ನು ಬಹಳ ಧೀರತೆಯಿಂದ ವಹಿಸಿದ್ದರು. ಅದೇ ರೀತಿ ಅವರು ಕಳೆದ ಶೂರಾದ ಅಧ್ಯಕ್ಷತೆಯನ್ನು ಸಹ ವಹಿಸಿದ್ದರು. ಅಲ್ಲಾಹನು ಅವರಿಗೆ ಅರವತ್ತೆರಡು ವರ್ಷಗಳ ದೀರ್ಘಕಾಲ ಜಮಾಅತಿಗೆ ಸೇವೆ ಸಲ್ಲಿಸುವ ಸೌಭಾಗ್ಯ ನೀಡಿದನು. ಜೀವನದ ಕೊನೆಯ ದಿನಗಳಲ್ಲಿ ಅವರು ತಮ್ಮ ಕುಟುಂಬದವರೊಡನೆ ಹೀಗೆ ಹೇಳುತ್ತಿದ್ದರು: ನನ್ನ ಜನನ ರಮಝಾನ್ ತಿಂಗಳಲ್ಲಿ ಆಗಿತ್ತು. ನನ್ನ ಮರಣವೂ ರಮಝಾನ್‌ನಲ್ಲಿಯೇ ಆಗುವುದು ಎಂದು ನಾನು ಭಾವಿಸುತ್ತೇನೆ. ಅದರಂತೆಯೇ ಇಪ್ಪತ್ತೇಳನೇ ರಮಝಾನಿನಲ್ಲಿ ಅವರು ನಿಧನರಾದರು. ಅವರು ಬಹಳ ಪರಿಶ್ರಮಿ ಮತ್ತು ವಿನಮ್ರ ವ್ಯಕ್ತಿಯಾಗಿದ್ದರು. ಯಾವಾಗಲೂ ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದರು. ಯಾರಿಗೂ ಹೊರೆಯಾಗಬಾರದೆಂದು ಬಯಸುತ್ತಿದ್ದರು. ಅವರು ಅರಿವುಳ್ಳ ಮತ್ತು ಅದರಂತೆ ನಡೆಯುವ ವ್ಯಕ್ತಿಯಾಗಿದ್ದರು. ವಖ್ಫಿನ ಪ್ರತಿಜ್ಞೆಯನ್ನು ಸಂಪೂರ್ಣವಾಗಿ ಪೂರೈಸಿದರು. ಅಲ್ಲಾಹನು ಅವರ ಪದವಿಗಳನ್ನು ಉನ್ನತಗೊಳಿಸಲಿ. ಇಕ್ಬಾಲ್ ಬೇಗಮ್ ಸಾಹಿಬ ರೊಂದಿಗೆ ಅವರ ಮೊದಲ ವಿವಾಹವಾಗಿತ್ತು. ಅವರಿಗೆ ಇಬ್ಬರು ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಇದ್ದಾರೆ. ಅನಂತರ ಆ ಪತ್ನಿಯ ಮರಣದ ನಂತರ ಅವರ ಎರಡನೇ ವಿವಾಹವಾಯಿತು. ಅವರ ಗಂಡುಮಕ್ಕಳು, ಹೆಣ್ಣುಮಕ್ಕಳು, ಅಳಿಯಂದಿರು ಮುಂತಾದ ಎಲ್ಲರಿಗೂ ದೀನಿನ

ಸೇವೆ ಮಾಡುವ ಸೌಭಾಗ್ಯ ಲಭಿಸುತ್ತಿದೆ. ಅಲ್ಲಾಹನು ಅವರ ಸಂತತಿಯಲ್ಲೂ ದೀನಿನ ಸೇವೆ ಮಾಡುವ ಹುಮ್ಮಸ್ಸನ್ನು ಮತ್ತು ಆವೇಶವನ್ನು ನೆಲೆನಿಲ್ಲಿಸಲಿ.

(ಅನಂತರ ಹುರ್ಝೂರ್ ಕೆನಡದ ಖಝಾ ಬೋರ್ಡಿನ ಸದರ್ ಆಗಿದ್ದ ಸನ್ಮಾನ್ಯ ಅಬ್ದುರ್ರಶೀದ್ ಯಹ್ಯಾ ಸಾಹಿಬ್, ಹೈದರಾಬಾದ್ ಸಿಂಧಿನ ಜಿಲ್ಲಾ ಅಮೀರ್ ಆಗಿದ್ದ ಮಿರ್ಝಾ ಇಮ್ತಿಯಾಝ್ ಅಹ್ಮದ್ ಸಾಹಿಬ್, ಅಲ್ಜೀರಿಯಾದ ಜಿಲ್ಲಾ ಅಮೀರ್ ಆಗಿದ್ದ ಸನ್ಮಾನ್ಯ ಅಲ್‌ಹಾಜ್ ಮುಹಮ್ಮದ್ ಬಿಲ್ ಅರಬಿ ಸಾಹಿಬ್ ಮತ್ತು ಹೈದರಾಬಾದಿನ ಕೊಟರಿ ಜಿಲ್ಲೆಯ ಸನ್ಮಾನ್ಯ ಮುಹಮ್ಮದ್ ಅಶ್ರಫ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ದಿವಂಗತರ ಉನ್ನತ ಪದವಿಗಳಿಗಾಗಿ ಮತ್ತು ಮಗ್‌ಫಿರತ್‌ಗಾಗಿ ಪ್ರಾರ್ಥಿಸಿದರು.)

*****

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ؕ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*
At, ***'Masjid Mubarak',*** *Islamabad, Tilford,* U.K. On 04-04-2025
**Summarized by** *Majlis Ansarullah Bharat*
***Kannada Translation****:* Moulavi Inamullah for Kannada Desk, Qadian
***Reviewed by****:* M.P Ibrahim | ***Layout****:* Basheer K.P. Manjeshwar
***Published By****:* Kannada Isha'at Team for Nazarath Nashr-O-Isha'ath, Qadian
***Email*****:** *khutuba.kannada@gmail.com*
**You can find all the Sermons archived at**: www.alislam.org/friday-sermon